REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2024-2026
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ
# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ಕನ್ನಡ ವಾರಪತ್ರಿಕೆ

ಸಂಪುಟ : 32 । ಸಂಚಿಕೆ : 29 । 22 ಅಕ್ಟೋಬರ್ 2025 । ಬುಧವಾರ । ಪುಟಗಳು : 8 । ಬೆಲೆ : 2/-




## ಮತ್ತೊಮ್ಮೆ ಬ್ಯಾಂಕುಗಳ ಮೆಗಾ ವಿಲೀನಕ್ಕೆ ಕೇಂದ್ರ ಸಿದ್ಧತೆ

**ಹೊಸದಿಲ್ಲಿ :** ಕೇಂದ್ರ ಸರ್ಕಾರವು ದೇಶದ ವಲಯದಲ್ಲಿ ಮತ್ತೊಂದು ಸುತ್ತಿನ ಬೃಹತ್ ಸುಧಾರಣೆಗೆ ಮುಂದಾಗಿದೆ. ಸಣ್ಣ ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ದೊಡ್ಡ ಬ್ಯಾಂಕುಗಳೊಂದಿಗೆ ವಿಲೀನಗೊಳಿಸುವ ಬೃಹತ್ ಯೋಜನೆಯನ್ನು ರೂಪಿಸುತ್ತಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಮನಿ ಕಂಟ್ರೋಲ್ ವರದಿ ಮಾಡಿದೆ.

ಕಡಿಮೆ ಸಂಖ್ಯೆಯ, ಆದರೆ ಆರ್ಥಿಕವಾಗಿ ಬಲಿಷ್ಠವಾಗಿರುವ ಬ್ಯಾಂಕ್‌ಗಳನ್ನು ರಚಿಸಿ, ದೇಶದ ಮುಂದಿನ ಹಂತದ ಸಾಲ ವಿಸ್ತರಣೆ ಮತ್ತು ಆರ್ಥಿಕ ಸುಧಾರಣೆಗಳಿಗೆ ಬೆಂಬಲ ನೀಡುವುದು ಈ ವಿಲೀನದ ಮುಖ್ಯ ಉದ್ದೇಶವಾಗಿದೆ.

ಸರ್ಕಾರದ ಮೂಲಗಳ ಪ್ರಕಾರ, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಮಹಾರಾಷ್ಟ್ರ ಇತ್ಯಾದಿ ಬ್ಯಾಂಕುಗಳನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂತಹ ದೈತ್ಯ ಬ್ಯಾಂಕ್‌ಗಳೊಂದಿಗೆ ವಿಲೀನಗೊಳಿಸುವ ಪ್ರಸ್ತಾವನೆ ಸಿದ್ಧವಾಗಿದೆ.

ಈ ಕುರಿತ ಚರ್ಚೆಗಳನ್ನು ನಡೆಸಿ 2027ರ ಒಳಗೆ ವಿಲೀನವನ್ನು ಅಂತಿಮಗೊಳಿಸುವ ಸಂಬಂಧ ರೂಪುರೇಷೆಗಳನ್ನು ಸಿದ್ಧಪಡಿಸುವ ಗುರಿ ಹೊಂದಲಾಗಿದೆ. ಈ ವಿಲೀನ ಪ್ರಸ್ತಾವನೆಯ ಕುರಿತ




ಅಧಿಕೃತ ಚರ್ಚೆಯ ದಾಖಲೆಯನ್ನು ಮೊದಲು ಸಂಪುಟ ಸಭೆಯಲ್ಲಿ ಚರ್ಚಿಸಿ, ನಂತರ ಪ್ರಧಾನ ಮಂತ್ರಿ ಕಚೇರಿಯ ಪರಿಶೀಲನೆಗೆ ಕಳುಹಿಸಲಾಗುತ್ತದೆ. ಬಳಿಕ ಸಂಬಂಧಪಟ್ಟ ಬ್ಯಾಂಕ್‌ಗಳ ಅಭಿಪ್ರಾಯವನ್ನು ಪಡೆದು, ಆಂತರಿಕವಾಗಿ ಒಮ್ಮತ ಮೂಡಿದ ನಂತರವೇ ಸರ್ಕಾರ ಈ ಬಗ್ಗೆ ಅಧಿಕೃತ ಘೋಷಣೆ ಮಾಡುವ ಸಾಧ್ಯತೆ ಇದೆ. ಈ ಹಿಂದೆ 2017 ರಿಂದ 2020ರ ನಡುವೆ ಕೇಂದ್ರ ಸರ್ಕಾರ 10 ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ನಾಲ್ಕು ದೊಡ್ಡ ಬ್ಯಾಂಕ್‌ಗಳಾಗಿ ವಿಲೀನಗೊಳಿಸಿತ್ತು. ಇದರಿಂದಾಗಿ ದೇಶದಲ್ಲಿದ್ದ 27 ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸಂಖ್ಯೆ 12ಕ್ಕೆ ಇಳಿಕೆ ಕಂಡಿತ್ತು. ಈ ಸಂದರ್ಭದಲ್ಲಿ ಬ್ಯಾಂಕ್ ಅನ್ನು ಕೆನರಾ ಬ್ಯಾಂಕ್‌ನೊಂದಿಗೆ ವಿಲೀನಗೊಳಿಸಿದ್ದರೆ, ಒರಿಯಂಟಲ್ ಬ್ಯಾಂಕ್ ಆಫ್ ಕಾಮರ್ಸ್ ಮತ್ತು ಯುನೈಟೆಡ್ ಬ್ಯಾಂಕ್ ಆಫ್ ಇಂಡಿಯಾವನ್ನು ಪಂಜಾಬ್ ನ್ಯಾಷನಲ್ ಬ್ಯಾಂಕಿನಲ್ಲಿ ವಿಲೀನ ಮಾಡಲಾಗಿತ್ತು.

ನೀತಿ ಆಯೋಗದ ಶಿಫಾರಸುಗಳ ಹಿನ್ನೆಲೆಯಲ್ಲಿ ಈ ಬಾರಿ ಮತ್ತೆ ಬ್ಯಾಂಕುಗಳ ವಿಲೀನಕ್ಕೆ ಮತ್ತೆ ಚಾಲನೆ ನೀಡಲಾಗುತ್ತಿದೆ. ಎಸ್‌ಬಿಐ, ಪಿಎನ್‌ಬಿ, ಬಿಒಬಿ ಮತ್ತು ಕೆನರಾ ಬ್ಯಾಂಕ್‌ನಂತಹ ಕೆಲವೇ ಕೆಲವು ದೊಡ್ಡ ಸರ್ಕಾರಿ ಬ್ಯಾಂಕ್‌ಗಳನ್ನು ಮಾತ್ರ ಉಳಿಸಿಕೊಂಡು, ಉಳಿದ ಸಣ್ಣ ಬ್ಯಾಂಕುಗಳನ್ನು ಖಾಸಗೀಕರಣಗೊಳಿಸಲು ಅಥವಾ ವಿಲೀನಗೊಳಿಸಲು ನೀತಿ ಆಯೋಗ ಈ ಹಿಂದೆ ಶಿಫಾರಸು ಮಾಡಿತ್ತು.

ಖಾಸಗಿ ಬ್ಯಾಂಕುಗಳು ಮತ್ತು ಫಿನ್‌ಟೆಕ್ ಕಂಪನಿಗಳಿಂದ ಹೆಚ್ಚುತ್ತಿರುವ ಸ್ಪರ್ಧೆಯನ್ನು ಎದುರಿಸಲು ಸಾರ್ವಜನಿಕ ವಲಯದ ಬ್ಯಾಂಕ್‌ಗಳನ್ನು ಜಾಗತಿಕ ಮಟ್ಟದಲ್ಲಿ ಬಲಪಡಿಸುವುದು ಸರ್ಕಾರದ ಮುಖ್ಯ ಉದ್ದೇಶವಾಗಿದೆ.

ರಿಸರ್ವ್ ಬ್ಯಾಂಕಿನಿಂದ ಇಂಟರ್ನೆಟ್ ಅಗತ್ಯವಿಲ್ಲದ ಡಿಜಿಟಲ್ ರೂಪಾಯಿ ಬಿಡುಗಡೆ 2
ಎಂ.ಸಿ.ಸಿ. ಬ್ಯಾಂಕಿನ 12ನೇ ಎಟಿಎಂ ಕಿನ್ನಿಗೋಳಿ ಶಾಖೆಯಲ್ಲಿ ಉದ್ಘಾಟನೆ 4
ನಿಮ್ಮ ಪ್ರಶ್ನೆ – ನಮ್ಮ ಉತ್ತರ 7

## ಸಂಪಾದಕೀಯ

### ಆತ್ಮೀಯ ಸಹಕಾರಿಗಳೇ...



## ದೀಪಾವಳಿ ನಮ್ಮ ಅಂತರಂಗದಲ್ಲಿ ಅರಿವೆಂಬ ಬೆಳಕನ್ನು ಮೂಡಿಸಲಿ

ದೀಪಾವಳಿ ಒಂದು ದಿನದ ಹಬ್ಬವಲ್ಲ; ಅದು ರಾಜ್ಯದ, ದೇಶದ ಎಲ್ಲೆಡೆ ಕಾರ್ತಿಕ ಮಾಸ ಮುಗಿಯುವ ತನಕ ನಡೆಯುತ್ತಲೇ ಇರುತ್ತದೆ. ಊರ ದೇವರ ದೀಪೋತ್ಸವದ, ತೆಪ್ಪೋತ್ಸವದ ಹೆಸರಿನಲ್ಲಿ ಜನ ದೀಪಗಳನ್ನು ಹಚ್ಚಿ ಸಂಭ್ರಮಿಸುವುದು ನೋಡಲು ಚಂದ. ಈ ಕತ್ತಲು ಎನ್ನುವುದು ಅಜ್ಞಾನದ ಸಂಕೇತ. ಕತ್ತಲನ್ನು ಕಳೆದರೆ ಮಾತ್ರ ಜೀವನ ಬೆಳಕಿನ ಹಾದಿಯಲ್ಲಿ ಸಾಗುವುದು ಸಾಧ್ಯ. ದೀಪವೆಂದರೆ ಕೇವಲ ಬೆಳಕಲ್ಲ, ಅದು ಅಜ್ಞಾನವೆಂಬ ಅಂಧಕಾರವನ್ನು ಅಳಿಸಿ ಜ್ಞಾನದ ದೀವಿಗೆಯನ್ನು ಬೆಳಗಿಸುವುದು. ಇದು ನಮ್ಮೊಳಗಿನ ಜ್ಯೋತಿ ಅಂದರೆ, ಸ್ವಯಂ ಜ್ಯೋತಿ ಸ್ವರೂಪನಾದ ಆತ್ಮನೇ ಪರಮಶಿವನಾಗಿದ್ದಾನೆ ಎನ್ನುವುದೇ ಅನೇಕ ದಾರ್ಶನಿಕರು ಕಂಡುಕೊಂಡ ಪರಿ.

ದೀಪಾವಳಿ ಎಂದರೆ ಹಣತೆಗಳ ಸಾಲು, ದೀಪಗಳ ಜಗಮಗ, ಪಟಾಕಿಗಳು ಸೃಷ್ಟಿಸುವ ನಕ್ಷತ್ರಲೋಕ. ಜೊತೆಗೆ ಆತ್ಮವಿಶ್ವಾಸ ಹೆಚ್ಚಿಸುವ, ಹೊಸತನದೆಡೆಗೆ ತುಡಿಯುವಂತೆ ಮಾಡುವ ಹಬ್ಬ. ಬೆಳಕು ಬರೀ ಕಣ್ಣಿಗಲ್ಲ. ಕತ್ತಲ ಮನದ ಬಾಗಿಲೊಳಗೂ ಬೆಳಕಿನ ಕಿರಣಗಳು ಸೋಕುತ್ತವೆ. ಹೊಸ ಬೆಳಕು ಚೆಲ್ಲಿ, ಹಳೆ ನೋವು ಸಂಕಟಗಳನ್ನು ಕಿತ್ತುಹಾಕಿ ಹಬ್ಬದ ಸಂಭ್ರಮಕ್ಕೆ ಅಣಿ ಮಾಡುತ್ತವೆ. ಬೆಳಗುವ ಪ್ರತಿ ದೀಪದಲ್ಲಿ, ಸಿಡಿಯುವ ಪಟಾಕಿಯ ನಕ್ಷತ್ರಗಳಲ್ಲಿ ಸಂಭ್ರಮ ಸಡಗರ ತುಳುಕಾಡುತ್ತದೆ.

ನಮ್ಮ ಕೃಷಿಕರು ತಾವು ಬೆಳೆದ ಬೆಳೆಗಳನ್ನು ಮಾರಿ ಸಾಲ ತೀರಿಸಿ, ಮನೆ ಮಂದಿಗೆ ಹೊಸ ಬಟ್ಟೆಗಳನ್ನು, ಮನೆಗೆ ಅಗತ್ಯವಿರುವ ವಸ್ತುಗಳನ್ನು, ಮುಂದಿನ ಬೇಸಾಯಕ್ಕೆ ಅಗತ್ಯವಿರುವ ಉಪಕರಣಗಳನ್ನು ಖರೀದಿಸುತ್ತಾರೆ. ಹಾಗೆಯೇ ಹಳೆ ಲೆಕ್ಕ ಚುಕ್ತ ಮಾಡಿ ಹೊಸ ಲೆಕ್ಕ ಶುರು ಮಾಡುತ್ತಾರೆ. ಇದು ಗ್ರಾಮೀಣ ಬದುಕಿನ ದೀಪಾವಳಿ.

ಇಂದು ದೀಪಾವಳಿ ಎಂದರೆ, ಆಚರಣೆಗಿಂತಲೂ ಆಡಂಬರಕ್ಕೆ ಆದ್ಯತೆಯಾಗಿದೆ. ಎಲ್ಲೇ ನೋಡಿದರೂ ಹಣತೆಗಳ ಸಾಲು, ದೀಪಗಳ ಜಗಮಗ, ಪಟಾಕಿ ಸಿಡಿತದ ಅಬ್ಬರದ ಹಾವಳಿಯಾಗಿದೆ. ಅನೇಕ ಮನೆಗಳಲ್ಲಿ ಪಟಾಕಿ ಸಿಡಿತದಿಂದಾದ ದುರಂತ ನೋವಿನಲ್ಲಿ ಮುಳಗಿಸುತ್ತಿದೆ. ಇನ್ನೊಂದೆಡೆ ಅಪಾರವಾದ ಪಟಾಕಿ ಸುಡುವಿಕೆಯಿಂದ ಪರಿಸರ ಮಾಲಿನ್ಯ, ಹಾಗೂ ಶಬ್ಧ ಮಾಲಿನ್ಯ ಉಂಟಾಗುತ್ತಿದೆ. ಇದರ ಹಿನ್ನೆಲೆಯಲ್ಲಿ ಇತ್ತೀಚೆಗೆ ಸುಪ್ರೀಂ ಕೋರ್ಟ್ ದೀಪಾವಳಿ ಹಬ್ಬಕ್ಕೆ ಹಸಿರು ಪಟಾಕಿಗಳ ಮಾರಾಟ ಮಾಡುವುದಕ್ಕೆ ಮಾತ್ರ ಅನುಮತಿ ನೀಡಿದೆ. ಇದರಿಂದ ಪರಸರ ಮಾಲಿನ್ಯವನ್ನು ಸ್ವಲ್ಪ ಮಟ್ಟಿಗೆ ತಡೆಗಟ್ಟಬಹುದಾಗಿದೆ.

ಬನ್ನಿ ನಾವು–ನೀವು ದೀಪಾವಳಿಯ ಜ್ಯೋತಿ ಬೆಳಗೋಣ ನಮ್ಮ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರ ಈ ಕವನ ನೆನೆಯೋಣ.

*ಬೆಳಗು ಬಾ ಜ್ಯೋತಿಯನು/ ಎದೆಯ ಮಂದಿರದಲ್ಲಿ/*
*ಜಗಕೆ ಬೆಳಕಾಗುವೀ ಶುಭ ಘಳಿಗೆಯಲ್ಲಿ/ ಇನಿತು ದಿನ ಜಡ ನಾನು/*
*ಬಂದ ಚೇತನ ನೀನು/ ನಿನ್ನ ಶಕ್ತಿಯ ಬಲದಿ ವ್ಯಕ್ತಿಯಾದೆನು ನಾನು/ ಈ ಲೋಕದಲ್ಲಿ...*

ಇದೇ ದೀಪಾವಳಿಯ ಆಶಯ. ಹಚ್ಚಬೇಕಾಗಿರುವುದು ಹೊರಗಿನ ಬೆಳಕನಲ್ಲ, ನಮ್ಮ ಅಂತರಂಗದ ಅರಿವೆಂಬ ಬೆಳಕು ಮೂಡಬೇಕು ಎನ್ನುವುದೇ ದೀಪಾವಳಿ ಆಚರಣೆಯ ಹಿಂದಿನ ತತ್ವ ಎಂದು ನಾನು ಭಾವಿಸಿದ್ದೇನೆ.

▸▸ ಎಚ್.ಕೆ. ಪಾಟೀಲ

## ರಿಸರ್ವ್ ಬ್ಯಾಂಕಿನಿಂದ ಇಂಟರ್ನೆಟ್ ಅಗತ್ಯವಿಲ್ಲದ ಡಿಜಿಟಲ್ ರೂಪಾಯಿ ಬಿಡುಗಡೆ

**ನವದೆಹಲಿ :** ಮುಂಬೈನಲ್ಲಿ ನಡೆದ ಗ್ಲೋಬಲ್ ಫಿನ್‌ಟೆಕ್ ಫೆಸ್ಟ್‌ನಲ್ಲಿ ರಿಸರ್ವ್ ಬ್ಯಾಂಕ್ ಆಫ್‌ಲೈನ್ ಪಾವತಿಸಬಹುದಾದ ಡಿಜಿಟಲ್ ರೂಪಾಯಿಯನ್ನು ಬಿಡುಗಡೆಗೊಳಿಸಿದೆ. ಆಫ್‌ಲೈನ್ ಡಿಜಿಟಲ್ ರೂಪಾಯಿಯ ವೈಶಿಷ್ಟ್ಯವೆಂದರೆ ಅದು ಇಂಟರ್ನೆಟ್ ಅಥವಾ ಮೊಬೈಲ್ ನೆಟ್‌ವರ್ಕ್ ಪ್ರವೇಶವಿಲ್ಲದೆ ಡಿಜಿಟಲ್ ಪಾವತಿಗಳನ್ನ ಮಾಡಬಹುದಾಗಿದೆ. ನೀವು ಅದನ್ನು ನಗದು ರೀತಿಯಲ್ಲಿ ಖರ್ಚು ಮಾಡಬಹುದು. QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಟ್ಯಾಪ್ ಮಾಡಿ ಮತ್ತು ನಿಮ್ಮ ಪಾವತಿ ಯಶಸ್ವಿಯಾಗಿ ಪೂರ್ಣಗೊಳ್ಳುತ್ತದೆ. ನಿಮ್ಮ ಹಣವನ್ನು ನಿಮ್ಮ ವ್ಯಾಲೆಟ್‌ನಲ್ಲಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸಬಹುದು.

**ಡಿಜಿಟಲ್ ರೂಪಾಯಿ ಎಂದರೇನು? :** ಡಿಜಿಟಲ್ ರೂಪಾಯಿ, ಅಥವಾ ಇ–ರೂಪಿ ಭಾರತದ ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ (CBDC). ನೀವು ಇದನ್ನು ಭಾರತೀಯ ರೂಪಾಯಿಯ ಡಿಜಿಟಲ್ ಆವೃತ್ತಿ ಎಂದೂ ಕರೆಯಬಹುದು. ಇಂಟರ್ನೆಟ್ ಪ್ರವೇಶವಿಲ್ಲದೆಯೂ ಸಹ ನೀವು ಡಿಜಿಟಲ್ ರೂಪಾಯಿಯನ್ನು ಬಳಸಬಹುದು. ಉದಾಹರಣೆಗೆ, ಈ ಡಿಜಿಟಲ್ ರೂಪಾಯಿ ನಿಮ್ಮ ವ್ಯಾಲೆಟ್‌ನಲ್ಲಿರುವ ನಗದನ್ನು ಹೋಲುತ್ತದೆ. ಒಂದೇ ವ್ಯತ್ಯಾಸವೆಂದರೆ ಅದು ಡಿಜಿಟಲ್ ರೂಪದಲ್ಲಿ ಲಭ್ಯವಿದೆ. ನಿಮ್ಮ ಡಿಜಿಟಲ್ ವ್ಯಾಲೆಟ್'ನಲ್ಲಿ ಸಂಗ್ರಹಿಸುವ ಮೂಲಕ ನೀವು ಅದನ್ನು ಆಫ್‌ಲೈನ್'ನಲ್ಲಿ ಬಳಸಬಹುದು. ಇದಲ್ಲದೆ, ಪ್ರತಿ ವಹಿವಾಟಿಗೆ ನಿಮ್ಮ ಬ್ಯಾಂಕ್ ಖಾತೆಗೆ ಪ್ರವೇಶವನ್ನು ಹೊಂದಿರಬೇಕಾಗಿಲ್ಲ. ಬಳಕೆದಾರರು ಈ ಅಪ್ಲಿಕೇಶನ್‌ಗಳನ್ನು Google Play Store ಅಥವಾ Apple Play Store ನಿಂದ ಡೌನ್‌ಲೋಡ್ ಮಾಡಬಹುದು. ನೋಂದಾಯಿಸಿದ ನಂತರ, ನೀವು ಯಾವುದೇ ವ್ಯಕ್ತಿ ಅಥವಾ ವ್ಯವಹಾರಕ್ಕೆ ಪಾವತಿಗಳನ್ನು ಮಾಡಲು ಸಾಧ್ಯವಾಗುತ್ತದೆ.

**ಯಾರಿಗೆ ಹೆಚ್ಚು ಪ್ರಯೋಜನವಾಗುತ್ತದೆ? :** ಈ ವೈಶಿಷ್ಟ್ಯವು ಗ್ರಾಮೀಣ ಮತ್ತು ದೂರದ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಪ್ರಯೋಜನವನ್ನು ನೀಡುತ್ತದೆ, ಅಲ್ಲಿ ಇಂಟರ್ನೆಟ್ ಮತ್ತು ಮೊಬೈಲ್ ನೆಟ್‌ವರ್ಕ್ ಪ್ರವೇಶವು ಸಮಸ್ಯೆಯಾಗಿದೆ. ಇದರ ಪ್ರಮುಖ ವೈಶಿಷ್ಟ್ಯವೆಂದರೆ ಆಫ್‌ಲೈನ್ ಪಾವತಿ. ಇದು ಟೆಲಿಕಾಂ ಕಂಪನಿಗಳು ಮತ್ತು NFC ಆಧಾರಿತ ಪಾವತಿಗಳ ಬೆಂಬಲವನ್ನು ಬಳಸಿಕೊಳ್ಳುತ್ತದೆ. ಇದರರ್ಥ ಆಫ್‌ಲೈನ್ ಪಾವತಿಗಳನ್ನ ಮಾಡಲು ನಿಮಗೆ ಇಂಟರ್ನೆಟ್ ಅಗತ್ಯವಿಲ್ಲ, ಇದು ಹಣದ ವಹಿವಾಟುಗಳನ್ನ ಸುಲಭಗೊಳಿಸುತ್ತದೆ.

**ಯಾವ ಬ್ಯಾಂಕುಗಳಲ್ಲಿ ಬಿಡುಗಡೆ :** ದೇಶದ ಹಲವಾರು ಬ್ಯಾಂಕುಗಳಲ್ಲಿ ಡಿಜಿಟಲ್ ರೂಪಾಯಿಯನ್ನು ವ್ಯಾಲೆಟ್ ಆಗಿ ಲಭ್ಯವಾಗುವಂತೆ ಮಾಡಲಾಗುತ್ತಿದೆ. ಇದನ್ನು ಎಸ್‌ಬಿಐ, ಐಸಿಐಸಿಐ ಬ್ಯಾಂಕ್, ಐಡಿಎಫ್‌ಸಿ, ಫಸ್ಟ್ ಬ್ಯಾಂಕ್, ಯೆಸ್ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಬರೋಡಾ, ಕೋಟಕ್ ಮಹೀಂದ್ರಾ ಬ್ಯಾಂಕ್, ಕೆನರಾ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಇಂಡಸ್ ಇಂಡ್ ಬ್ಯಾಂಕ್, ಪಂಜಾಬ್ ನ್ಯಾಷನಲ್ ಬ್ಯಾಂಕ್, ಫೆಡರಲ್ ಬ್ಯಾಂಕ್ ಮತ್ತು ಇಂಡಿಯನ್ ಬ್ಯಾಂಕುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ.

# ಶಿಗ್ಗಾಂವ ಅರ್ಬನ್ ಕೋ-ಆಪ್ ಬ್ಯಾಂಕಿನ 29ನೇ ವಾರ್ಷಿಕ ಮಹಾಸಭೆ

**ಶಿಗ್ಗಾಂವ :** ದಿನಾಂಕ : 13-09-2025ರಂದು ಶಿಗ್ಗಾಂವ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಿನ ಸನ್ 2024-25 ಸಾಲಿನ 29ನೇ ವಾರ್ಷಿಕ ಮಹಾಸಭೆಯನ್ನು ಬ್ಯಾಂಕಿನ ಸಭಾಂಗಣದಲ್ಲಿ ಕರೆಯಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜಗದೀಶ ತೊಂಡಿಹಾಳ ವಹಿಸಿದ್ದರು.

ಕಾರ್ಯಕ್ರಮದ ಪೂರ್ವದಲ್ಲಿ ವರದಿ ಸಾಲಿನಲ್ಲಿ ಮೃತರಾದ ಬ್ಯಾಂಕಿನ ಸದಸ್ಯರುಗಳಿಗೆ ಶೃದ್ದಾಂಜಲಿ ಸಲ್ಲಿಸಿ 2 ನಿಮಿಷ ಮೌನ ಆಚರಿಸಲಾಯಿತು. ನಂತರ ಬ್ಯಾಂಕಿನ ಮಹಾಸಭೆಯ ವಿಷಯಗಳು ಚರ್ಚೆಯಾಗಿ ಸರ್ವಾನುಮತದಿಂದ ಅಂಗಿಕಾರಗೊಂಡವು. ಸನ್ 2024-25ನೇ ಸಾಲಿಗೆ ಶೇ.12ರಂತೆ ಡಿವಿಡೆಂಡನ್ನು ಹಂಚಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಳ್ಳಲಾಗಿತು.

ಮಹಾಸಭೆಯಲ್ಲಿ ಸದಸ್ಯರ ಮಕ್ಕಳು ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷ ಶ್ರೀ ಅಶೋಕ ಎಸ್. ಬಂಕಾಪೂರ ಹಾಗೂ ನಿರ್ದೇಶಕರಾದ ಶ್ರೀ ತ್ರೀಲೋಚನಯ್ಯ ವೀ. ಸುರಗಿಮಠ, ಶ್ರೀ ಸಿದ್ದಾರ್ಥ ಹೆಚ್. ಪಾಟೀಲ, ಶ್ರೀ ಕುಮಾರ ಎಮ್. ಹೆಸರೂರ, ಶ್ರೀ ಚಿದಾನಂದ ಎಮ್. ಕಮ್ಮಾರ, ಶ್ರೀ ಮಾಲತೇಶ ಎಫ್. ಗೌಳಿ, ಶ್ರೀ ಧರ್ಮಪ್ಪ ಎಫ್. ಧಾರವಾಡ, ಡಾ॥ ಬಿ.ಹೆಚ್. ವೀರಣ್ಣ, ಶ್ರೀ ಉಮೇಶ ಬಿ. ಗೌಳಿ, ಶ್ರೀ ಧೀರೇಂದ್ರ. ಎಮ್. ಕುಂದಾಪೂರ, ಶ್ರೀಮತಿ ಕಾಶವ್ವ ಬಿ. ಹಾವೇರಿ, ಹಾಗೂ ಶ್ರೀಮತಿ ಚನ್ನಬಸವ್ವ ಎನ್. ಬಡ್ಡಿ ಉಪಸ್ಥಿತರಿದ್ದರು. ಬ್ಯಾಂಕ್ ಮ್ಯಾನೇಜರ್ ಶ್ರೀ ಶಿವಾನಂದ ಪಾಟೀಲರವರು ನಿರೂಪಿಸಿ ವಂದಿಸಿದರು.




# ದೈವಜ್ಞ ಸಹಕಾರ ಬ್ಯಾಂಕ್ : 51ನೇ ವಾರ್ಷಿಕ ಸರ್ವ ಸಾಧಾರಣ ಸಭೆ

**ಬೆಳಗಾವಿ :** ನಗರದ ದೈವಜ್ಞ ಸಹಕಾರ ಬ್ಯಾಂಕ ನಿಯಮಿತ, ಬೆಳಗಾವಿ, ಕಳೆದ ವರ್ಷ ಸುವರ್ಣ ಮಹೋತ್ಸವ ಆಚರಿಸಿಕೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಆಡಳಿತ ಮಂಡಳಿ, ಸದಸ್ಯರು ಹಾಗೂ ಸಿಬ್ಬಂದಿಗಳ ಸಹಕಾರದಿಂದ ಬ್ಯಾಂಕು ರೂ. 3.17 ಕೋಟಿ ಲಾಭಗಳಿಸಿದ್ದು, ಆದಾಯಕರ ಹಾಗೂ ಇತರೆ ನಿಧಿಗಳಿಗೆ ಅನುವು ಮಾಡಿ ರೂ. 1.76 ಕೋಟಿ ನಿವಳ ಲಾಭವನ್ನು ಗಳಿಸಿದೆ. ಈ ಸಂದರ್ಭದಲ್ಲಿ ಬ್ಯಾಂಕಿನ ಸದಸ್ಯರು ಹಾಗೂ ಗ್ರಾಹಕರಿಗೆ ಮೊಬೈಲ್ ಬ್ಯಾಂಕಿಂಗ್ ಸೌಲಭ್ಯ ಮತ್ತು ಡಿಜಿಟಲಿಕರಣ ಜೊತೆ ಆಧುನಿಕ ಸೌಲಭ್ಯಗಳು ನೀಡಲಾಗಿರುವ ಬಗ್ಗೆ ತಿಳಿಸಲಾಯಿತು.ಅದರಂತೆ ಹೊಸದಾಗಿ ಮನೆ ಬಾಗಿಲಿಗೆ ಬ್ಯಾಂಕಿಂಗ್ ಸೌಲಭ್ಯ ಪರಿಚಯಿಸಿರುವ ಬಗ್ಗೆ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿಕೊಂಡಿದ್ದ ಶ್ರೀ ರಾಜೇಶ ರಮಾಕಾಂತ ಅಣವೇಕರ ಅವರು ವಿವರಿಸಿದರು.




ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕ ಶ್ರೀ ಪದ್ಮನಾಭ ಎಸ್. ಶೇಟರವರು ವಾರ್ಷಿಕ ವರದಿಯ ಸಂಪೂರ್ಣ ಮಾಹಿತಿಯನ್ನು ಸಭೆಯಲ್ಲಿ ಮಂಡಿಸಿದರು.

ಬ್ಯಾಂಕಿನ ಅಡಾವೇ ಪತ್ರಿಕೆಯನ್ನು ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ವೀಣಾ ಪಿ.ಶೇಟ, ಲಾಭ ಹಾನಿ ಪತ್ರಿಕೆಯ ಮಾಹಿತಿ, ವ್ಯವಸ್ಥಾಪಕರಾದ ಶ್ರೀ ಗಣೇಶ ಕೆ.ಶೇಟ, ಆಯ-ವ್ಯಯ ಅಂದಾಜು ಪತ್ರಿಕೆಯ ಮಾಹಿತಿ, ವ್ಯವಸ್ಥಾಪಕರಾದ ಶ್ರೀ ಶ್ರೀನಿವಾಸ ಬಿ.ಶೆಟ್ಟಿ, ಅದರಂತೆ ಅಢಾವೆ ಪತ್ರಿಕೆಯ ಮಾಹಿತಿಯನ್ನು ವ್ಯವಸ್ಥಾಪಕರಾದ ಶ್ರೀ ಶ್ರೀನಿವಾಸ ಬಿ.ಶೆಟ್ಟಿ ಹಾಗೂ ಶ್ರೀ ರಾಘವೇಂದ್ರ ಪಿ.ರಾಯ್ಕರ ಇವರು ಸಭೆಗೆ ಮಾಹಿತಿಯನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ಶ್ರೀ ಮಂಜುನಾಥ ಎಸ್. ಶೇಟ, ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಜೀವನ ಎಸ್. ವೆರ್ಣೇಕರ, ಶ್ರೀ ಉದಯ ಜಿ ರಾಯ್ಕರ, ಶ್ರೀ ಸಮೀರ ಸಿ.ಅಣವೇಕರ, ಶ್ರೀ ಉದಯಶಂಕರ ಎನ್. ಭಟ್, ಶ್ರೀ ಜೀವನ ಡಿ. ವೆರ್ಣೇಕರ, ಶ್ರೀ ಮಾಣಿಕ (ಗಜಾನನ) ಎನ್. ಅಣವೇಕರ, ಶ್ರೀಮತಿ ವಿನಿತಾ ವಿ.ಶೇಟ, ಶ್ರೀ ರಘುನಾಥ ಎಚ್.ಶೇಜೆಕಾನ, ಶ್ರೀ ನಾಗೇಂದ್ರ ಎಮ್.ಪಾವುಸ್ಕರ, ಶ್ರೀ ಲಕ್ಷ್ಮೀಕಾಂತ ಎಸ್. ನೇತಲಕರ, ಶ್ರೀ ಸಂಜಯ ಆರ್.ರಾಯ್ಕರ, ಶ್ರೀಮತಿ ಅಂಜನಾ ಎಸ್. ರಾಯ್ಕರ್ ಮತ್ತು ಶಾಖಾ ವ್ಯವಸ್ಥಾಪಕರು, ಬ್ಯಾಂಕಿನ ಸಿಬ್ಬಂದಿಗಳು, ಪಿಗ್ಮಿ ಸಂಗ್ರಹಕಾರರು, ಚಿನ್ನದ ಮೌಲ್ಯಮಾಪಕರು, ಬ್ಯಾಂಕಿನ ಸದಸ್ಯರು, ಠೇವುದಾರರು ಉಪಸ್ಥಿತರಿದ್ದರು. ಬ್ಯಾಂಕಿನ ಸದಸ್ಯರ ಮಕ್ಕಳಿಗೆ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ 2ನೇಯ ವರ್ಷದ ಪರೀಕ್ಷೆಯಲ್ಲಿ 80ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ ಮಕ್ಕಳಿಗೆ ಪ್ರೋತ್ಸಾಹ ಧನ ನೀಡಿ ಸನ್ಮಾನಿಸಲಾಯಿತು. ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾದ ರಾಘವೇಂದ್ರ ಪಿ. ರಾಯ್ಕರವರು ವಂದನಾರ್ಪಣೆ ಮಾಡಿದರು.

# ಎಂ.ಸಿ.ಸಿ. ಬ್ಯಾಂಕಿನ 12ನೇ ಎಟಿಎಂ ಕಿನ್ನಿಗೋಳಿ ಶಾಖೆಯಲ್ಲಿ ಉದ್ಘಾಟನೆ






ಎಂಸಿಸಿ ಬ್ಯಾಂಕ್, ಮಂಗಳೂರು ತನ್ನ 12ನೇ ಎಟಿಎಂ ಅನ್ನು ಸೆಪ್ಟೆಂಬರ್ 13, 2025ರ ಶನಿವಾರ ಕಿನ್ನಿಗೋಳಿ ಶಾಖೆಯಲ್ಲಿ ಉದ್ಘಾಟಿಸಿತು.

ಈ ಎಟಿಎಂ ಅನ್ನು ಎಂಆರ್‌ಪಿಎಲ್‌ನ ಕಾರ್ಪೊರೇಟ್ ಬ್ರ್ಯಾಂಡಿಂಗ್ ಮತ್ತು ಕಾರ್ಪೊರೇಟ್ ಕಮ್ಯುನಿಕೇಷನ್ಸ್‌ನ ಚೀಫ್ ಜನರಲ್ ಮ್ಯಾನೇಜರ್ ಡಾ. ರುಡಾಲ್ಫ್ ಜೋಯರ್ ನೊರೊನ್ಹಾ ಅವರು ಉದ್ಘಾಟಿಸಿದರು. ಕಿನ್ನಿಗೋಳಿಯ ಇಮ್ಯಾಕ್ಯುಲೇಟ್ ಕಾನ್ಸೆಪ್ಷನ್ ಚರ್ಚ್‌ನ ಧರ್ಮಗುರು ರೆವರೆಂಡ್ ಫಾದರ್ ಜೋಕಿಮ್ ಫೆರ್ನಾಂಡಿಸ್ ಅವರು ಎಟಿಎಂ ಅನ್ನು ಆಶೀರ್ವದಿಸಿದರು. ಹೊಸದಾಗಿ ಉದ್ಘಾಟನೆಗೊಂಡ ಎಟಿಎಂನಿಂದ ಮೊದಲ ನಗದು ಹಿಂಪಡೆಯುವಿಕೆಯನ್ನು ಬಳ್ಕುಂಜೆಯ ಸೇಂಟ್ ಪೌಲ್ಸ್ ಚರ್ಚ್‌ನ ಧರ್ಮಗುರು ರೆವರೆಂಡ್ ಫಾದರ್ ಪೌಲ್ ಸಿಕ್ವೇರಾ ಮಾಡಿದರು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾಜಿ ಎನ್‌ಅರ್‌ಐ, ಕಥೋಲಿಕ್ ಸಭಾ ಕಿನ್ನಿಗೋಳಿಯ ಕಾರ್ಯದರ್ಶಿ ಹಾಗೂ ವಿನ್ಸೆಂಟ್ ಡಿ ಪಾಲ್ ಲೆಕ್ಕಪರಿಶೋಧಕ ಶ್ರೀ ಜೆರೋಮ್ ಡಿ'ಅಲ್ಮೇಡಾ ಮತ್ತು ಕಿನ್ನಿಗೋಳಿಯ ಮೆಸ್ಸರ್ಸ್ ಚೈತನ್ಯ ಮೆಡಿಕಲ್ಸ್ ಮತ್ತು ಸಾಗರಿಕಾ ಅರೇಂಜರ್ಸ್‌ನ ಮಾಲೀಕ ಶ್ರೀ ಧನಂಜಯ ಪಿ.ಶೆಟ್ಟಿಗಾರ್ ಉಪಸ್ಥಿತರಿದ್ದರು. ವೇದಿಕೆಯಲ್ಲಿ ಜನರಲ್ ಮ್ಯಾನೇಜರ್ ಶ್ರೀಸುನಿಲ್ ಮಿನೇಜಸ್ ಮತ್ತು ಶಾಖಾ ವ್ಯವಸ್ಥಾಪಕ ಶ್ರೀ ಅನಿಲ್ ಆರ್. ಡಿ'ಸೋಜಾ ಹಾಜರಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ಎಂಸಿಸಿ ಬ್ಯಾಂಕಿನ ಅಧ್ಯಕ್ಷ ಸಹಕಾರ ರತ್ನ ಶ್ರೀ ಅನಿಲ್ ಲೋಬೊ ವಹಿಸಿದ್ದರು. ನಿರ್ದೇಶಕಿ ಡಾ। ಫ್ರೀಡಾ ಫ್ಲೇವಿಯಾ ಡಿ'ಸೋಜಾ ಸ್ವಾಗತಿಸಿದರು. ನಿರ್ದೇಶಕರಾದ ಶ್ರೀ ಅಂಡ್ರ್ಯೂ ಡಿಸೋಜ, ಶ್ರೀ ಮೆಲ್ವಿನ್ ವಾಸ್, ಶ್ರೀ ಡೆವಿಡ್ ಡಿಸೋಜ, ಉಪ ಪ್ರಧಾನ ವ್ಯವಸ್ಥಾಪಕ ಶ್ರೀ ರಾಜ್ ಮೆನೆಜಸ್, ಶಾಖಾ ವ್ಯವಸ್ಥಾಪಕರು, ಸಿಬ್ಬಂದಿ ಸದಸ್ಯರು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಭಾಗವಹಿಸಿದ್ದರು. ಶ್ರೀಮತಿ ಲವಿಟಾ ಡಿಸೋಜ, ಮುಲ್ಕಿ ನಿರೂಪಿಸಿ ವಂದಿಸಿದರು.

# ಶ್ರೀ ಗವಿಸಿದ್ದೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿ ಸದಸ್ಯರ ಅವಿರೋಧ ಆಯ್ಕೆ



ಶ್ರೀ ರಾಜಶೇಖರಗೌಡ
ಎಂ. ಆಡೂರ
ಅಧ್ಯಕ್ಷರು



ಶ್ರೀಮತಿ ಕಣ್ಣೆ ಪೂಜಾ ತಂದೆ
ಗಣೇಶಕುಮಾರ
ಉಪಾಧ್ಯಕ್ಷರು

**ಕೊಪ್ಪಳ** : ಶ್ರೀ ಗವಿಸಿದ್ಧೇಶ್ವರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಕೊಪ್ಪಳ ಇದರ ಸನ್ 2025 ರಿಂದ 2030ರ ವರೆಗಿನ 5 ಸಹಕಾರ ವರ್ಷಗಳ ಅವಧಿಗೆ ದಿನಾಂಕ : 14.09.2025ರಂದು ನಡೆಯಬೇಕಿದ್ದ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ದಿನಾಂಕ : 08.09.2025ರಂದು ಬ್ಯಾಂಕಿನ ಎಲ್ಲ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದು, ಅದರಂತೆ ದಿನಾಂಕ : 18.09.2025ರಂದು ನಡೆದ ಪದಾಧಿಕಾರಿಗಳ ಚುನಾವಣೆಯಲ್ಲಿ ನಿರ್ದೇಶಕರಾದ ಶ್ರೀ ರಾಜಶೇಖರಗೌಡ ಎಂ ಆಡೂರ ಇವರು ಅಧ್ಯಕ್ಷರಾಗಿ ಮೂರನೇ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದು ಹಾಗೂ ಶ್ರೀಮತಿ ಕಣ್ಣೆ ಪೂಜಾ ತಂದೆ ಗಣೇಶಕುಮಾರ ಇವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಅವಿರೋಧವಾಗಿ ಆಯ್ಕೆಯಾದ ನಿರ್ದೇಶಕರುಗಳು ಶ್ರೀ ಬಸವರಾಜ ಬಿ.ಶಹಪೂರ, ಶ್ರೀ ಗವಿಸಿದ್ದಪ್ಪ ಸಿ. ತಳಕಲ್, ಶ್ರೀ ವಿಶ್ವನಾಥ ಜಿ. ಅಗಡಿ, ಶ್ರೀ ರಾಜೇಂದ್ರಕುಮಾರ ಶಿವಪ್ಪ ಶೆಟ್ಟರ, ಶ್ರೀ ಶ್ರೀಶೈಲಪ್ಪ ಬಸಪ್ಪ ಅಂಗಡಿ, ಶ್ರೀ ಬಸಯ್ಯ ಶಿವಾನಂದಯ್ಯ ಹಿರೇಮಠ, ಶ್ರೀಮತಿ ಸೈಯದಾ ಶಹನಾಜ ಬೇಗಂ ನಾಸೀರ್‌ಹುಸೇನಿ, ಶ್ರೀ ರಮೇಶ ಮಲ್ಲಪ್ಪ ಕವಲೂರ, ಶ್ರೀ ನಾಗರಾಜ ದಶರಥ ಅರಕೇರಿ, ಶ್ರೀ ಬಾಬಾ ಹನೀಫ್‌ಸಾಬ ಅರಗಂಜಿ, ಶ್ರೀ ಮಲ್ಲಿಕಾರ್ಜುನ ಶಿವನಗೌಡ ಪಾಟೀಲ್.



## ಮಹಾಮಂಡಳಕ್ಕೆ ಭೇಟಿ

ಮುಂಬಯಿನ ಅಲೈನ್ಸ್ ‌& ಪಾರ್ಟನರ್ ಶಿಫ್‌ನ ಅಸೋಸಿಯೇಟ್ ಕಂಪನಿಯ ಡೈರೆಕ್ಟರ್ ಮೆಹುಲ್ ಮಿಸ್ತ್ರಿ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆಯವರನ್ನು ಭೇಟಿ ಮಾಡಿ ಸಮಾಲೋಚಿಸಿದರು.

## ಶ್ರೀ ಗೋಕರ್ಣನಾಥ ಕೋ-ಆಪರೇಟಿವ್ ಬ್ಯಾಂಕಿನ 101ನೇ ವಾರ್ಷಿಕ ಮಹಾಸಭೆ



ಶ್ರೀ ಗೋಕರ್ಣನಾಥ ಕೋ–ಆಪರೇಟಿವ್ ಬ್ಯಾಂಕ್ ಲಿ. ಮಂಗಳೂರು ಇದರ 101 ನೇ ವಾರ್ಷಿಕ ಸಾಮಾನ್ಯ ಸಭೆಯು ದಿನಾಂಕ 14–09–2025 ರಂದು ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಚಂದ್ರಶೇಖರ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಕುದ್ರೋಳಿ ದೇವಸ್ಥಾನ, ಶ್ರೀ ಕೊರಗಪ್ಪ ಕಲ್ಯಾಣ ಮಂಟಪ, ಕುದ್ರೋಳಿ, ಮಂಗಳೂರಿನಲ್ಲಿ ನಡೆಯಿತು.

ಬ್ಯಾಂಕಿನ ಸ್ಥಿರಾಸ್ತಿ ಮೌಲ್ಯಮಾಪಕರಾದ ಶ್ರೀ ಅಶೋಕ್ ಕುಮಾರ್, ಆತ್ಮಶಕ್ತಿ ಪತ್ರಿಕೆಯ ಸಂಪಾದಕರಾದ ಶ್ರೀ ವಾಮನ್ ಕುದ್ರೋಳಿ, ಎಸ್.ಸಿ.ಡಿ.ಸಿ.ಸಿ. ಬ್ಯಾಂಕಿನ ಮಾಜಿ ಸಿಬ್ಬಂದಿಯಾದ ಶ್ರೀ ಅಶೋಕ್, ಕರ್ನಾಟಕ ಬ್ಯಾಂಕಿನ ಮಾಜಿ ಸಿಬ್ಬಂದಿಯಾದ ಶ್ರೀ ದಿನೇಶ್ ಅಂಚನ್ ಹಾಗೂ ಬ್ಯಾಂಕಿನ ಸದಸ್ಯರಾದ ಶ್ರೀಮತಿ ಸಂಧ್ಯಾಲತಾರವರು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು.

2024–25ನೇ ಸಾಲಿನಲ್ಲಿ ಬ್ಯಾಂಕು ರೂ.211.55 ಲಕ್ಷ ನಿರ್ವಹಣಾ ಲಾಭ ಗಳಿಸಿ 95.50ಲಕ್ಷ ನಿವ್ವಳ ಲಾಭ ಗಳಿಸಿರುತ್ತದೆ.ಬ್ಯಾಂಕಿನಲ್ಲಿ ಒಟ್ಟು 23498 ಮಂದಿ ಪಾಲುದಾರ ಸದಸ್ಯರಿದ್ದು 900.92 ಲಕ್ಷ ರೂ. ಪಾಲುಬಂಡವಾಳ ಮತ್ತು ಠೇವಣಿಯು 18508.78 ಲಕ್ಷ ರೂ. ಇದ್ದು, ದುಡಿಯುವ ಬಂಡವಾಳ 21394.06 ಲಕ್ಷ ರೂ.ಇರುತ್ತದೆ. ಮೇಲಿನ ಎಲ್ಲಾ ಅಂಕಿ ಅಂಶಗಳ ಸಂಪೂರ್ಣ ವರದಿಯನ್ನು ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್ ಶ್ರೀಮತಿ ವಿಜಯಾ ಮಂಗಳನಾಥ ಕೋಟ್ಯಾನ್ ರವರು ಸರ್ವ ಸದಸ್ಯರ ಸಭೆಗೆ ಮಂಡಿಸಿದರು. ಸರ್ವ ಸದಸ್ಯರು ಸರ್ವಾನುಮತದಿಂದ ಅನುಮೋದಿಸಿದರು.

ಬ್ಯಾಂಕಿನ ಅಭಿವೃದ್ಧಿಗೆ ಪೂರಕವಾಗಿ ಸದಸ್ಯರು ಅಪೇಕ್ಷಿಸಿದ ಪ್ರಶ್ನೆ, ಸಲಹೆ, ಸೂಚನೆಗಳಿಗೆ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಚಂದ್ರಶೇಖರ್ ಕುಮಾರ್ ಮತ್ತು ಬ್ಯಾಂಕಿನ ಪ್ರಭಾರ ಜನರಲ್ ಮೆನೇಜರ್ ಶ್ರೀಮತಿ ವಿಜಯಾ ಮಂಗಳನಾಥ ಕೋಟ್ಯಾನ್ ರವರು ಉತ್ತರಿಸಿದರು ಹಾಗೂ ಬ್ಯಾಂಕಿನಲ್ಲಿ ಗ್ರಾಹಕರಿಗೆ ಪರಿಚಯಿಸಲಾದ ಇತರ ಸೌಲಭ್ಯಗಳಾದ RTGS/NEFT, NACH ಅಂತರ್ ಶಾಖಾ ಹಣ ವರ್ಗಾವಣೆ, ಸೇಫ್ ಲಾಕರ್, ಮೊಬೈಲ್ ಬ್ಯಾಂಕಿಂಗ್, ಎಸ್. ಎಂ.ಎಸ್. ಸೌಲಭ್ಯ, ರೂಪೇ ಡೆಬಿಟ್ ಕಾರ್ಡ್, POS, E-Com, U.P.I , QR Code ಹಾಗೂ IMPS ಸೌಲಭ್ಯಗಳ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ವಿನಂತಿಸಿದರು.

ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಜಯರಾಮ್ ಪೂಜಾರಿಯವರು ವಂದನಾರ್ಪಣೆ ಸಲ್ಲಿಸಿದರು. ನಿರ್ದೇಶಕರುಗಳಾದ ಶ್ರೀ ಜಯರಾಮ್ ಕಾರಂದೂರು, ಶ್ರೀ ಯೋಗೀಶ್ ಕೋಟ್ಯಾನ್, ಶ್ರೀ ಹರೀಶ್ ಪೂಜಾರಿ ಕೆ, ಶ್ರೀ ಕುಪ್ಪ ಪೂಜಾರಿ, ಶ್ರೀ ರಾಜೇಶ್ ಕುಮಾರ್ ಜಿ ಸುವರ್ಣ, ಶ್ರೀಮತಿ ಗಾಯತ್ರಿ ಗಣೇಶ್, ಶ್ರೀಮತಿ ಚಂದ್ರಾವತಿ, ಶ್ರೀ ನಾಗರಾಜ, ಶ್ರೀ ಜಗದೀಶ್ ಎನ್, ಶ್ರೀ ಅನಿಲ್ ಕುಮಾರ್, ಶ್ರೀ ಪ್ರಕಾಶ್, ಶ್ರೀ ಕೆ. ರಮೇಶ್ ಬಂಗೇರ, ಶ್ರೀ ಕೇಶವ ಬಿ, ಶ್ರೀ ಶಂಕರ ನಾಯ್ಕ್, ಶ್ರೀಮತಿ ಆಶಾಲತಾ, ಶ್ರೀ ವರದರಾಜ್ ಎ., ಶ್ರೀ ಶ್ರವಣ್ ಕುಮಾರ್ ಹಾಗೂ ವ್ಯವಸ್ಥಾಪನಾ ಮಂಡಲಿ ಸದಸ್ಯರಾದ ಶ್ರೀ ರಾಜರಾಮ್ ಬಿ. ಅಂಚನ್, ಶ್ರೀ ಜಯಾನಂದ ಎಮ್ ಮತ್ತು ಶ್ರೀ ದೀಪಕ್ ಎಂ. ಕೋಟ್ಯಾನ್ ರವರು ಉಪಸ್ಥಿತರಿದ್ದರು. ಬ್ಯಾಂಕಿನ ಅಕೌಂಟೆಂಟ್ ಶ್ರೀ ಹರೀಶ್ ಕೊಡವೂರು ರವರು ಸಹಕರಿಸಿದರು.

# ಹಾವೇರಿಯ ದಿ ಕಾರ್ಡಮಮ್ ಮರ್ಚಂಟ್ಸ್ ಕೋ-ಆಪ್ ಬ್ಯಾಂಕಿನ ವಾರ್ಷಿಕ ಮಹಾಸಭೆ




**ಹಾವೇರಿ :** ದಿ ಕಾರ್ಡಮಮ್ ಮರ್ಚಂಟ್ಸ ಕೋ-ಆಪರೇಟಿವ್ ಬ್ಯಾಂಕ್ ಲಿ., ಹಾವೇರಿ ಇದರ ಸನ್ 2024-2025ನೇ ಸಾಲಿನ 60ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ದಿ : 14-09-2025ರ ರವಿವಾರದಂದು ಬ್ಯಾಂಕಿನ ಸಭಾಂಗಣದಲ್ಲಿ ನೇರವೇರಿತು.

ಸದರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆಯನ್ನು ಬ್ಯಾಂಕಿನ ಚೇರಮನ್‌ರಾದ ಶ್ರೀ ಗಂಗಾಧರ ಬಿ. ಮಳಗಿ ಇವರು ವಹಿಸಿದ್ದರು. ವೇದಿಕೆಯ ಮೇಲೆ ಉಪಾಧ್ಯಕ್ಷರಾದ ಶ್ರೀ ಮಹಾಂತಪ್ಪ ಕೆ.ಮಾಸೂರ ಹಾಗೂ ನಿರ್ದೇಶಕರಾದ ಶ್ರೀ ಮಹಾಂತೇಶ ಸಿ.ಸುರಳಿಹಳ್ಳಿ, ಶ್ರೀ ವಿರುಪಾಕ್ಷಪ್ಪ ಜಿ. ಬಣಕಾರ, ಶ್ರೀ ಮಲ್ಲಿಕಾರ್ಜುನ. ಎಸ್. ಹಂದ್ರಾಳ, ಡಾ. ಶ್ರೀ ಸಿದ್ದೇಶ್ವರ ಎಲ್. ಬಾಲೇಹೊಸೂರ, ಶ್ರೀ ಅಶೋಕ ಎಸ್. ಮಾಗನೂರ, ಶ್ರೀಮತಿ ವಿದ್ಯಾವತಿ ವಿ. ಕುರಬಗೊಂಡಶೆಟ್ಟರ, ಶ್ರೀಮತಿ ಗೀತಾ. ಎ. ಅಟವಾಳಗಿ, ಶ್ರೀ ವಿರುಪಾಕ್ಷಪ್ಪ ಆಯ್. ಹತ್ತಿಮತ್ತೂರ, ಶ್ರೀ ರಾಜಶೇಖರ ಎಸ್. ಕುದರಿ, ಶ್ರೀ ಕುಶಾಲ ಸಿ. ನರಗುಂದ, ಶ್ರೀ ಹನುಮಂತಪ್ಪ ಆರ್. ಹೊಸಮನಿ, ಹಾಗೂ ವೃತ್ತಿಪರ ನಿರ್ದೇಶಕರಾದ ಶ್ರೀ ಸಿದ್ರಾಮೇಶ್ವರ ಬಿ. ಕನವಳ್ಳಿ, CA ಶ್ರೀ ಬಸವರಾಜ ಪಿ. ಪಾಟೀಲ, ಹಾಗೂ ಬ್ಯಾಂಕಿನ ವ್ಯವಸ್ಥಾಪಕರಾದ ಶ್ರೀಮತಿ ಆಶಾ ಎಸ್. ಮಟಗೊಡ್ಡಿ ಮತ್ತು ಸಿಬ್ಬಂದಿಗಳು ಹಾಜರಿದ್ದರು.

ಬ್ಯಾಂಕು ಸನ್ 2024-2025ನೇ ಸಾಲಿನಲ್ಲಿ ರೂ.534.22 ಕೋಟಿಗಳಷ್ಟು ಒಟ್ಟು ವಹಿವಾಟು ನಡೆಸಿ, ರೂ.48.82 ಕೋಟಿ ಠೇವಣಿ, ರೂ.42.30 ಕೋಟಿ ಸಾಲವನ್ನು ಹೊಂದಿದ್ದು, ರೂ 1.12 ಕೋಟಿ ನಿವ್ವಳ ಲಾಭ ಗಳಿಸಿ "ಶೂನ್ಯ" ನಿವ್ವಳ ಅನುತ್ಪಾದಕ ಸಾಲದ ಪ್ರಮಾಣದೊಂದಿಗೆ ಉತ್ತಮ ಪ್ರಗತಿ ಸಾಧಿಸಿದೆ. ಬ್ಯಾಂಕಿನ ಆಡಳಿತ ಮಂಡಳಿಯವರು ಬ್ಯಾಂಕಿನ ಸದಸ್ಯರಿಗೆ ಶೇ.19% ರಷ್ಟು ಡಿವಿಡೆಂಡ್ ಪಾವತಿಸಲು ತೀರ್ಮಾನಿಸಿರುತ್ತಾರೆ.

ಬ್ಯಾಂಕು ಶಾಸನಬದ್ಧ ಲೆಕ್ಕಪರಿಶೋಧನೆಯಲ್ಲಿ "ಎ" ಶ್ರೇಣಿಯನ್ನು ಪಡೆದು ಮುನ್ನಡೆಯತ್ತಿದೆ. ಗ್ರಾಹಕರ ಸೇವೆಯನ್ನು ನೀಡುವದರಲ್ಲಿ ಬ್ಯಾಂಕ್ ಉತ್ತಮ ಪ್ರಗತಿ ಸಾಧಿಸಿದೆ.

## ಸಹಕಾರ ಶಿಕ್ಷಣ ನಿಧಿ ಸಲ್ಲಿಕೆ

ಗದಗ ಬೆಟಗೇರಿಯ ಮರ್ಚಂಟ್ಸ್ ಲಿಬರಲ್ ಕೋ-ಆಪರೇಟಿವ್ ಬ್ಯಾಂಕಿನ ಸಹಕಾರ ಶಿಕ್ಷಣ ನಿಧಿ ಚೆಕ್ಕನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಮೋಹನ ಟಿ. ಕೋಟಿ ರವರು ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎಸ್. ಕೇರೂರೆ ಯವರಿಗೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಕುಬೇರಗೌಡ ಎಸ್. ಪರ್ವತಗೌಡ್ರ, ನಿರ್ದೇಶಕರುಗಳಾದ ವಿಶ್ವನಾಥ ಸಿ. ರಾಮನಕೊಪ್ಪ, ಎಸ್. ಕೆ.ಕುರಡಗಿ, ತೋಟೊಸಾ ಆರ್. ಭಾಂಡಗೆ, ಸಂತೋಷ ಬಿ.ಅಬ್ಬಿಗೇರಿ, ಚಂದ್ರಕಾಂತ ಎಸ್. ಸಂಕಣ್ಣವರ, ಸಿ.ಟಿ. ದುಂದೂರ, ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಾದ ರಾಜು ಎಲ್. ಕೋಟಿ ಉಪಸ್ಥಿತರಿದ್ದರು.



# ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ನಮ್ಮ ಬ್ಯಾಂಕಿನ ಕಾರ್ಯವ್ಯಾಪ್ತಿ ಒಂದು ಜಿಲ್ಲೆಯಾಗಿದ್ದು, ನಮ್ಮ ಆಡಳಿತ ಮಂಡಳಿ ಕಾರ್ಯಾಚರಣೆಯನ್ನು ಐದು ಜಿಲ್ಲೆಗಳಿಗೆ ವಿಸ್ತರಿಸಲು ನಿರ್ಧರಿಸಿದೆ. ನಮ್ಮದು ಕೇವಲ ಒಂದು ಶಾಖೆಯಿದ್ದು, ಸತತ 10 ವರ್ಷಗಳಿಂದ ಲಾಭ ಗಳಿಸಿದ್ದು, ಬ್ಯಾಂಕಿನ ಸುಸ್ತಿ ಸಾಲ ಶೂನ್ಯ ಇರುತ್ತದೆ. ನಮ್ಮ ಬ್ಯಾಂಕು ಎಫ್.ಎಸ್. ಡಬ್ಲು.ಎಂ. ಆಗಿದೆ. ನಾವು ಎರಡು ಶಾಖೆಗಳನ್ನು ತೆರೆಯಲು ನಿರ್ಧರಿಸಿದ್ದೇವೆ. ಈ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಗದಗ ಜಿಲ್ಲೆ.**

**ಉತ್ತರ :** ಪ್ರಥಮವಾಗಿ ಬ್ಯಾಂಕಿನ ಕಾರ್ಯಕ್ಷೇತ್ರವನ್ನು ಐದು ಜಿಲ್ಲೆಗೆ ವಿಸ್ತರಿಸಿಕೊಳ್ಳಿ. ಕಾರ್ಯಾಚರಣೆಯನ್ನು ವಿಸ್ತರಿಸಿಕೊಳ್ಳಲು ಯಾಚಿಸಿದ ಜಿಲ್ಲೆಗಳು ನಿಮ್ಮ ಜಿಲ್ಲೆಯ ಪಕ್ಕದ (adjacent) ಜಿಲ್ಲೆಗಳಲ್ಲದಿದ್ದಲ್ಲಿ ಭಾರತೀಯ ರಿಜರ್ವ್ ಬ್ಯಾಂಕಿಗೆ ನಿರಾಪೇಕ್ಷಣಾ ಪ್ರಮಾಣಪತ್ರ (ಎನ್.ಒ.ಸಿ) ನೀಡುವಂತೆ ಅರ್ಜಿ ಸಲ್ಲಿಸಿ. ಬ್ಯಾಂಕಿನ ಕಾರ್ಯಾಚರಣೆಯನ್ನು ಐದು ಜಿಲ್ಲೆಗೆ ವಿಸ್ತರಿಸಲು ಬೇಕಾದ ಅನುಮತಿ ದೊರಕಿದ ನಂತರವೇ ಹೊಸ ಪ್ರದೇಶದಲ್ಲಿ ಶಾಖೆಯನ್ನು ತೆರೆಯಬಹುದು. ನಿಮ್ಮ ಬ್ಯಾಂಕು ಆರ್ಥಿಕವಾಗಿ ಸದೃಢವಾಗಿ ಒಳ್ಳೆಯ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ನೀವು ವರ್ಷಕ್ಕೆ ಒಂದು ಶಾಖೆಯನ್ನು ಈಗಿರುವ ಕಾರ್ಯಾಚರಣೆ ಪ್ರದೇಶದಲ್ಲಿ ತೆರೆಯಬಹುದು.

**02. ನಮ್ಮ ಒಬ್ಬ ಸದಸ್ಯರು ನೋಂದಾಯಿತವಲ್ಲದ ಜಿ.ಪಿ.ಎ ದಾರರಿಂದ ಒಂದು ಜಮೀನನ್ನು 9 ವರ್ಷದ ಹಿಂದೆ ಖರೀದಿಸಿದ್ದಾರೆ. ಆ ಜಮೀನನ್ನು ನಮ್ಮ ಸದಸ್ಯರೇ ಅನುಭೋಗದಲ್ಲಿ ಇರುತ್ತಾರೆ. ಈಗ, ಆ ಜಮೀನಿನ ಮೇಲೆ ಸಾಲಕ್ಕಾಗಿ ಬ್ಯಾಂಕಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆ ಆಸ್ತಿಯ ಮೇಲೆ ನಾವು ಸಾಲವನ್ನು ನೀಡಬಹುದೇ? ಮಾಹಿತಿ ತಿಳಿಸಿ.**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಚಿಕ್ಕಮಗಳೂರು ಜಿಲ್ಲೆ.**

**ಉತ್ತರ :** ಪವರ್ ಆಫ್ ಅಟಾರ್ನಿ ಕಾಯ್ದೆ, 1882ರ ಕಲಂ 17ರಲ್ಲಿ ತಿಳಿಸಿದಂತೆ ಕೆಲವು ದಾಖಲೆಗಳಿಗೆ ನೋಂದಣಿ ಅಗತ್ಯವಿದೆ ಎಂದು ಹೇಳಿದೆ. ಆದರೆ, ಎಲ್ಲಾ ಜಿ.ಪಿ.ಎ.ಗಳ ನೋಂದಣಿಯನ್ನು ಕಡ್ಡಾಯಗೊಳಿಸಿಲ್ಲ. ದಯವಿಟ್ಟು ನಿಮ್ಮ ನಿರ್ದಿಷ್ಟ ಸಂದರ್ಭಕ್ಕೆ ಅನುಗುಣವಾಗಿ ಬ್ಯಾಂಕಿನ ಕಾನೂನು ಸಲಹೆಗಾರರಿಂದ ಕಾನೂನು ಸಲಹೆ ಪಡೆಯಿರಿ.

## ಮೈಸೂರಿನ ದಿ ರೈಲ್ವೆ ಕೋ-ಆಪರೇಟಿವ್ ಬ್ಯಾಂಕಿನಿಂದ ಆರು ತಿಂಗಳಲ್ಲಿ ರೂ. 100ಕೋಟಿ ಅವಧಿ ಠೇವಣಿ ಸಂಗ್ರಹ

**ಮೈಸೂರು :** ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಸಂಸ್ಥೆಯು ತನ್ನ ಬೆಳವಣಿಗೆಯ ಹಾದಿಯಲ್ಲಿ ಮತ್ತೊಂದು ಮಹತ್ವದ ಮೆಟ್ಟಿಲು ಏರಿದೆ. ಕೇವಲ ಆರು ತಿಂಗಳ ಅಲ್ಪಾವಧಿಯಲ್ಲೇ ಬ್ಯಾಂಕ್ 100ಕೋಟಿ ರೂ.ಗಳಿಗೂ ಅಧಿಕ ಅವಧಿ ಠೇವಣಿಗಳನ್ನು ಯಶಸ್ವಿಯಾಗಿ ಸಂಗ್ರಹಿಸಿದೆ. ಈ ಸಾಧನೆ ಸದಸ್ಯರು ಮತ್ತು ಸಾರ್ವಜನಿಕರು ಬ್ಯಾಂಕ್ ಮೇಲೆ ಹೊಂದಿರುವ ವಿಶ್ವಾಸ ಹಾಗೂ ನಂಬಿಕೆಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ, ಬ್ಯಾಂಕ್ ತನ್ನ ಗ್ರಾಹಕರ ಅಮೂಲ್ಯ ಉಳಿತಾಯವನ್ನು ಸುರಕ್ಷಿತವಾಗಿ ಕಾಪಾಡುವ ಮತ್ತು ನಂಬಲು ಅರ್ಹ ಸಂಸ್ಥೆಯೆಂಬ ತನ್ನ ಹೆಗ್ಗಳಿಕೆಯನ್ನು ಮತ್ತೊಮ್ಮೆ ದೃಢಪಡಿಸಿದೆ.

ಈ ಸಂದರ್ಭದಲ್ಲಿ ಬ್ಯಾಂಕ್‌ನ ಅಧ್ಯಕ್ಷರಾದ ಡಾ॥ ಮಂಜೇಗೌಡ ಎಂ.ಬಿ ರವರು ಮತ್ತು ಬ್ಯಾಂಕಿನ ಆಡಳಿತ ಮಂಡಳಿಯು ತಮ್ಮ ಸದಸ್ಯರು, ಠೇವಣಿದಾರರು ಮತ್ತು ಶುಭಚಿಂತಕರು ನೀಡಿರುವ ನಿಷ್ಠಾವಂತ ಸಹಕಾರ ಮತ್ತು ವಿಶ್ವಾಸಕ್ಕೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿದರು. ದಿ ರೈಲ್ವೆ ಕೋ–ಆಪರೇಟಿವ್ ಬ್ಯಾಂಕ್ ನಿ., ಮುಂದುವರೆಯುವ ದಿನಗಳಲ್ಲಿ ಆಧುನಿಕ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವುದು "ಆರ್ಥಿಕ ಶಿಸ್ತು ಕಾಪಾಡುವುದು ಮತ್ತು ಗ್ರಾಹಕ ಸೇವಾ ನಿಷ್ಠೆಯನ್ನು ಉಳಿಸಿಕೊಳ್ಳುವುದು" ಎಂಬ ಗುರಿಯನ್ನು ಮುಂದುವರಿಸುತ್ತಿದೆ.

## ಪಟ್ಟಣ ಸಹಕಾರ ಬ್ಯಾಂಕುಗಳ ಗಮನಕ್ಕೆ

ಮಹಾಮಂಡಳವು "ವಾರಪತ್ರಿಕೆ" ಹಾಗೂ "ತ್ರೈಮಾಸಿಕ ಬ್ಯಾಂಕಿಂಗ್ ಪ್ರಪಂಚ ಪತ್ರಿಕೆ" ಎಂಬ ಎರಡು ಪತ್ರಿಕೆಗಳನ್ನು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಸಹಕಾರ ಕ್ಷೇತ್ರ, ಬ್ಯಾಂಕಿಂಗ್ ಕ್ಷೇತ್ರ ಹಾಗೂ ಇತರೆ ಉಪಯುಕ್ತ ಸುದ್ದಿ / ವಿಚಾರಗಳನ್ನು ಹಾಗೂ ಇತ್ತೀಚಿನ ದಿನಗಳಲ್ಲಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಬದಲಾವಣೆಗೊಳಪಡುವ ಸಹಕಾರಿ ಕಾನೂನು ವಿದ್ಯಮಾನಗಳ ಕುರಿತು ಪ್ರಶ್ನೋತ್ತರ, ವಿವಿಧ ಬ್ಯಾಂಕುಗಳ ಯಶೋಗಾಥೆ, ಪ್ರಗತಿ ಚಿತ್ರ, ಬ್ಯಾಂಕುಗಳಲ್ಲಿ ಜರುಗಿರುವ ವಿವಿಧ ಸಮಾರಂಭಗಳ ವಿವರಗಳನ್ನು ಪ್ರಕಟಿಸಲಾಗುತ್ತಿದೆ.

ಪ್ರಯುಕ್ತ, ಬ್ಯಾಂಕಿಗೆ ಸಂಬಂಧಿಸಿದ ವರದಿಗಳನ್ನು ಕೂಡಲೇ ಮಹಾಮಂಡಳಕ್ಕೆ ಅಂಚೆ ಮೂಲಕ ಅಥವಾ ಇ–ಮೇಲ್ ವಿಳಾಸಕ್ಕೆ email: editorkubf1@gmail.com ಅಥವಾ kscubfed@gmail.comಗೆ ಕಳುಹಿಸಿ ಕೊಟ್ಟಲ್ಲಿ ಮಹಾಮಂಡಳದ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.



# ಒನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಬೆಂಗಳೂರಿನಲ್ಲಿ ಕಾಲ್ ಸೆಂಟರ್ ಹೆಸರಿನಲ್ಲಿ ಅಮೆರಿಕ ಮತ್ತು ಕೆನಡಾ ಪ್ರಜೆಗಳನ್ನು ಗುರಿಯಾಗಿಸಿಕೊಂಡು 'ಡಿಜಿಟಲ್ ಅರೆಸ್ಟ್' ನಡೆಸಿ, ಕೋಟ್ಯಂತರ ರೂಪಾಯಿ ವಂಚನೆ ಎಸಗಿರುವ ಜಾಲವನ್ನು ಪೊಲೀಸರು ಭೇದಿಸಿದ್ದಾರೆ. 'ಸೈಬಿಟ್ಸ್' ಎಂಬ ನಕಲಿ ಕಾಲ್ ಸೆಂಟರ್, ಅಮೆರಿಕದ ಅಧಿಕಾರಿಗಳೆಂದು ನಟಿಸಿ ಹಣ ವಸೂಲಿ ಮಾಡುತ್ತಿತ್ತು. ಈ ಪ್ರಕರಣದಲ್ಲಿ 16 ಯುವಕರನ್ನು ಬಂಧಿಸಲಾಗಿದ್ದು, ತನಿಖೆ ಮುಂದುವರಿದಿದೆ.
- ಉತ್ತರ ಪ್ರದೇಶದ ಕಾನ್ಪುರದ ನಿವಾಸಿಯಾದ ಮನೀಶ್ ಧಮೇಜಾ ಎಂಬಾತ 1,638 ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿದ್ದಾರೆ. ಈ ಎಲ್ಲಾ ಕ್ರೆಡಿಟ್ ಕಾರ್ಡ್‌ಗಳನ್ನೇ ತಮ್ಮ ಸಂಪಾದನೆಯ ಮೂಲವಾಗಿಸಿಕೊಂಡಿದ್ದಾರೆ ಜೊತೆಗೆ, ವಿಶ್ವದಲ್ಲೇ ಅತಿ ಹೆಚ್ಚು ಕ್ರೆಡಿಟ್ ಕಾರ್ಡ್‌ಗಳನ್ನು ಹೊಂದಿರುವ ಏಕೈಕ ವ್ಯಕ್ತಿ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ.
- ರಾಜಸ್ಥಾನದ ಜೈಸಲ್ಮೇರ್‌ನಿಂದ ಜೋಧಪುರಕ್ಕೆ ಹೋಗುತ್ತಿದ್ದ ಖಾಸಗಿ ಬಸ್‌ನಲ್ಲಿ ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದ್ದು ಹೊತ್ತಿ ಉರಿದಿದೆ. ದುರಂತದಲ್ಲಿ ಮೂವರು ಮಕ್ಕಳು, ನಾಲ್ವರು ಮಹಿಳೆಯರು ಸೇರಿದಂತೆ ಸುಮಾರು 20 ಪ್ರಯಾಣಿಕರು ಮೃತಪಟ್ಟಿದ್ದಾರೆ. ಇನ್ನು 19ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿದ್ದು ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.
- ಅಮೇರಿಕಾದ ಕಂಪನಿಯ ಪ್ರಸಿದ್ಧ ವಸ್ತು ವಿಜ್ಞಾನಿ ಲಿಯಾಂಗ್ಬಿಂಗ್ ಹೂ ಅವರು ಇನ್ವೆಂಟ್‌ವುಡ್ ಅನ್ನು ಕಂಡು ಹಿಡಿದಿದ್ದು, ಇದಕ್ಕೆ ಸೂಪರ್‌ವುಡ್ ಹೆಸರಿಡಲಾಗಿದೆ. ಇದು ಉಕ್ಕಿಗಿಂತ 10 ಪಟ್ಟು ಹೆಚ್ಚು ಬಲಿಷ್ಠವಾಗಿದ್ದು, ಉಕ್ಕಿಗಿಂತ 6 ಪಟ್ಟು ಹಗುರವಾಗಿದೆ. ಸೂಪರ್‌ವುಡ್ ಈಗಾಗಲೇ ಮಾರುಕಟ್ಟೆಗೆ ಲಭ್ಯವಿದೆ.
- ಚೀನಾದಲ್ಲಿ ಹರಿಯುವ ಈ ಹುವಾಲ್ಕೆ ನದಿಯು ಸುಮಾರು 17ಕಿ.ಮೀ ದೂರ ಮಾತ್ರ ಹರಿಯುತ್ತದೆ. ಇದು ಕೇವಲ 15 ಸೆಂಟಿ ಮೀಟರ್‌ನಷ್ಟು ಅಗಲ ಹೊಂದಿದ್ದು ಕೆಲ ಕಡೆ ಈ ಅಗಲ ಕೊಂಚ ಹಿಗ್ಗಿರಬಹುದು. ಈ ಕಾರಣದಿಂದ ಈ ನದಿಯನ್ನು ವಿಶ್ವದ ಅತ್ಯಂತ ಕಿರಿದಾದ ನದಿ ಎಂದು ಕರೆಯಲಾಗಿದೆ.
- ಭಾರತದ ದಕ್ಷಿಣ ರಾಜ್ಯಗಳು ಅತಿ ಹೆಚ್ಚು ಆನೆಗಳಿಗೆ ನೆಲೆಯಾಗಿದ್ದು, ಕರ್ನಾಟಕ ಅಗ್ರಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ತಮಿಳುನಾಡು ಮತ್ತು ಕೇರಳ ರಾಜ್ಯಗಳು ಇವೆ. ಇತ್ತೀಚೆಗೆ ಬಿಡುಗಡೆ ಮಾಡಿರುವ ಸಮೀಕ್ಷಾ ವರದಿ ಪ್ರಕಾರ, ದೇಶದಲ್ಲಿ 22,446 ಆನೆಗಳಿವೆ.

## ಓದುಗರ ಅನಿಸಿಕೆ...




**ಸಂತಸ ಮೂಡಿಸಲಿದೆ :** ರಿಸರ್ವ್ ಬ್ಯಾಂಕ್ ದೇಶದ ಎಲ್ಲಾ ಬ್ಯಾಂಕುಗಳು ಬ್ಯಾಂಕುಗಳಲ್ಲಿ ಚೆಕ್ ವಿಲೇವಾರಿಗೆ ಹೊಸ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಇದರಿಂದಾಗಿ ಗ್ರಾಹಕರು ಬ್ಯಾಂಕಿಗೆ ಸಲ್ಲಿಸುವ ಚೆಕ್‌ಗಳು ಸದ್ಯ ಒಂದೇ ದಿನದಲ್ಲಿ ವಿಲೇವಾರಿಯಾಗುತ್ತಿದೆ. ಮುಂದಿನ ದಿನಗಳಲ್ಲಿ ಅಂದು ಸಲ್ಲಿಸಿದ ಚೆಕ್‌ಗಳು ಅಂದೇ ವಿಲೇವಾರಿಯಾಗಲಿದೆ ಎನ್ನುವುದು ಗ್ರಾಹಕರ ಮೊಗದಲ್ಲಿ ಸಂತಸ ಮೂಡಿಸಲಿದೆ.

**▸▸ ಜಗದೀಶ್ ಎಂ., ತೀರ್ಥಹಳ್ಳಿ**

**ಎಲ್ಲರ ಮೆಚ್ಚುಗೆಗಳಿಸಿದೆ :** ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಸದರಿ ಸಾಲಿನಲ್ಲಿ ಉತ್ತಮ ನಿವ್ವಳ ಲಾಭಗಳಿಸಿ ಪ್ರಗತಿ ಸಾಧಿಸಿವೆ. ಅಲ್ಲದೇ ತನ್ನ ಸದಸ್ಯರುಗಳಿಗೆ ಲಾಭಕ್ಕೆ ಅನುಗುಣವಾಗಿ ಡಿವಿಡೆಂಡ್ ನೀಡುತ್ತಿವೆ. ಜೊತೆಗೆ, ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ತನ್ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಗದು ಬಹುಮಾನ ನೀಡಿ ಗೌರವಿಸುತ್ತಿರುವುದು ಎಲ್ಲರ ಮೆಚ್ಚುಗೆಗಳಿಸಿದೆ.

**▸▸ ಆನಂದ ಪಾಟೀಲ ಕೊನೆಮನಿ, ಧಾರವಾಡ**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, #35, 3rd Cross, Sudhamanagar, Bangalore - 560027.